ಓ ಎಸ್ ನಂ. **378/2018**
ಪಿ ಡಬ್ಲ್ಯೂ: **01**

**ದಿ: 24.02.2021 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಸಿ.ಬಿ. ವಕೀಲರಿಂದಃ**

1. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

2. ನಾನು ಹೊಸಕುಂದುರು ಗ್ರಾಮದ ಹೌಸ್ ಲೀಸ್ಟ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-01 ಎಂದು ಗುರುತಿಸಲಾಯಿತು. ದಿಃ 24.08.2018 ರಂದು ಆನಿವಾಳ ಗ್ರಾಮ ಪಂಚಾಯ್ತಿಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-02 ಎಂದು ಗುರುತಿಸಲಾಯಿತು. ಒಂದು ಭಾವಚಿತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ರುಜುವಾತು ಪಡಿಸುವ ತಕರಾರಿಗೆ ಒಳಪಟ್ಟು ನಿಪಿ-03 ಎಂದು ಗುರುತಿಸಲಾಯಿತು. ದಿಃ 26.12.2000 ರ ಖಾಲಿ ನಿವೇಶನದ ಮೂಲ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-04 ಎಂದು ಗುರುತಿಸಲಾಯಿತು. ಋಣಬಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-05 ಎಂದು ಗುರುತಿಸಲಾಯಿತು. ಋಣಬಾರ ರಾಹಿತ್ಯ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-06 ಎಂದು ಗುರುತಿಸಲಾಯಿತು. ದಾವೆಯನ್ನು ಡಿಕ್ರಿ ಮಾಡಬೇಕೇಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಶ್ರೀ ಎ.ಎಲ್.ಬಿ. ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ *ಬೆರಳಚ್ಚು* ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .